


International Journal of Kannada Research
www.kannadajournal.com

ISSN: 2454–5813
IJKR 2019; 5(2): 22-25
© 2019 IJKR
www.kannadajournal.com
Received: 12-02-2019
Accepted: 14-03-2019

**ಡಾ. ಗುರುರಾಜ ಎಸ್. ನವಲಗುಂದ**
ಎಸ್.ಜೆ.ಎಂ.ವಿ. ಎಸ್. ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಲಯ, ಹುಬ್ಬಳ್ಳಿ

**Correspondence**
**ಡಾ. ಗುರುರಾಜ ಎಸ್. ನವಲಗುಂದ**
ಎಸ್.ಜೆ.ಎಂ.ವಿ. ಎಸ್. ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಲಯ, ಹುಬ್ಬಳ್ಳಿ

# ಅಬ್ಬಲೂರು ಶಾಸನ* : ಕೆಲವು ವಿಚಾರಗಳು

**ಡಾ. ಗುರುರಾಜ ಎಸ್. ನವಲಗುಂದ**

ಅಬಲೂರು ಶಾಸನವು ಕ್ರಿಸ್ತಶಕ ಸುಮಾರು 1200 ಎಂದು ಇದರ ಕಾಲವನ್ನು ಅಂದಾಜಿಸಲಾಗಿದೆ. ಈ ಶಾಸನವವನ್ನು ಏಕಾಂತದ ರಾಮಯ್ಯನ ಶೈವಧರ್ಮದ ಏಳ್ಗೆಗಾಗಿ ಮಾಡಿದ ಪವಾಡವೆಂತಲೂ ಪುರಾಣ ಐತಿಹ್ಯದಲ್ಲಿ ದಾಖಲಾಗಿದೆ. ಆದರೆ ಸದ್ಯ ನಾವು ಜೈನಧರ್ಮದ ಅವನತಿಯನ್ನು ಸೂಚಿಸುವ ಶಾಸನವೆಂದು, ಚಾರಿತ್ರಿಕ ದಾಖಲೆಗಳು ಮತ್ತು ಹಲವು ಸಮಕಾಲೀನ ಸಾಹಿತ್ಯಿಕ ಅಂಶಗಳನ್ನು ಈ ಶಾಸನದೊಂದಿಗೆ ತೌಲನೀಕರಿಸಿ ನೋಡುವ ಸಂದರ್ಭದಲ್ಲಿ ಹಲವು ಮಹತ್ವದ ವಿಷಯಗಳ ಮೇಲೆ ಅಬಲೂರು ಶಾಸನವು ಬೆಳಕು ಚೆಲ್ಲುತ್ತದೆ. ಇದು ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕು ಅಬಲೂರಿನ ಸೋಮನಾಥ ದೇವಾಲಯದಲ್ಲಿರುವ ಶಾಸನವಾಗಿದೆ. ಇಲ್ಲಿನ ಶಾಸನದಲ್ಲಿ ವ್ಯಕ್ತವಾದ ವಿಷಯವು ಒಂದು ಧರ್ಮದ ಹಿತಾಸಕ್ತಿಯನ್ನು ಕಾಪಾಡುವ ಕೃತ್ಯವಾಗಿದೆ. ಒಂದು ಧರ್ಮದಲ್ಲಿ ಉಂಟಾದ ಈ ಕೃತ್ಯದ ಹೆಮ್ಮೆಯು ಆ ಸಮಕಾಲೀನ ಎಲ್ಲ ಧರ್ಮಗಳ ಆಶಯವಾಗಿರಲು ಸಾಧ್ಯವಿಲ್ಲ. ಈ ಶಾಸನದಲ್ಲಿ ಬರುವ ಏಕಾಂತದ ರಾಮಯ್ಯನು ತನ್ನ ಕಾಲದಲ್ಲಿ ಹಾಗೂ ಮುಂದಿನ ದಿನಮಾನಗಳಲ್ಲಿ ಪ್ರಸಿದ್ಧನಾಗಿರಲು ಕಾರಣ, ಆತನ ಸಂಕುಚಿತ ದೃಷ್ಟಿಕೋನದಿಂದ ಕೂಡಿದ ಧಾರ್ಮಿಕ ನಿಷ್ಠೆ. ಈ ಒಂದು ಅಂಶ ಅಬಲೂರಿನಲ್ಲಿರುವ ಶಾಸನದಿಂದ ವ್ಯಕ್ತವಾಗುತ್ತದೆ. ಈ 'ಏಕಾಂತದ' ಎಂಬ ವಿಶೇಷಣವು ರಾಮಯ್ಯನಿಗೆ ಜೈನಧರ್ಮದ ಮೇಲಿನ ಅವನ ವಿಜಯದ ನಂತರ ಬಂದಿರಬಹುದೆಂದು ಊಹಿಸಿ, ಇದು ಅವನ ಶಿವನಿಷ್ಠೆಯನ್ನು ಸೂಚಿಸುವುದಲ್ಲದೆ 'ಅನೇಕಾಂತವಾದ' ಎಂದು ಕರೆಯಿಸಿಕೊಳ್ಳುವ ಜೈನಧರ್ಮವನ್ನು ಗೆದ್ದದ್ದಕ್ಕೆ ಸಂಕೇತವಾಗಿಯೂ ಇರಬಹುದು ಎಂದು ಪಿ.ಬಿ.ದೇಸಾಯಿ ಅವರು ಅಭಿಪ್ರಾಯ ಪಡುತ್ತಾರೆ.[1] ಅಲ್ಲದೇ ಅಬಲೂರು ಶಾಸನದಲ್ಲಿ ಏಕಾಂತದ ರಾಮಯ್ಯನು ಶಿವನನ್ನು ಕುರಿತು 'ಏಕಾಗ್ರ ಭಕ್ತಿಯೋಗದಿನೇಕಾಕಿಯೆನಲ್ಕೆ.... ಏಕಾಂತದೊಳ್'[2] ಆರಾಧಿಸಿದ್ದರಿಂದ ಅವನಿಗೆ 'ಏಕಾಂತದ ರಾಮಯ್ಯ'ನೆಂಬ ಹೆಸರು ಬಂದಿರಬೇಕು. 'ಏಕಾಂತ ರಾಮಯ್ಯನು ಶಿವಭಕ್ತಿಯಲ್ಲಿ ಏಕಾಗ್ರನಿಷ್ಠೆಯನ್ನು ಸಾಧಿಸಿಕೊಂಡಿದ್ದು ಪರರಿಗೆ ಹಿತ ಸಾಧಿಸುವಲ್ಲಿ ಕೊನೆ ಕಂಡಿದ್ದರೆ ಅದು ಅವನ ಸಾಧನೆ ಶಕ್ತಿಯಾಗಿ ಪರಿಣಮಿಸುತ್ತಿತ್ತು, ಆದರೆ ಅವನ ಏಕಾಗ್ರನಿಷ್ಠೆಯು ಪರಮತ ಹಿಂಸಾಪೀಡನೆಗೆ ಪ್ರೇರಕಶಕ್ತಿಯಾಗಿತ್ತು ಎಂದು ಶಾಸನದ ಪಠ್ಯವೇ ನಿರೂಪಿಸುತ್ತದೆ. ಅಲ್ಲದೇ 'ಏಕಾನ್ತದ ರಾಮಯ್ಯಂ ಅತಿ ಕ್ರುದ್ಧನಾಗಿ ಶಿವ ಸನ್ನಿಧಿಯೊಳನ್ಯದೇವತಾ ಸ್ತವನಂ ಮಾಡಲಾಗದು' ಎಂಬುದಾಗಿ ಶಾಸನವು ಏಕಾಂತದ ರಾಮಯ್ಯನ ಹಿಂಸಾಕೃತ್ಯಗಳನ್ನು ಶ್ರೇಷ್ಠಗುಣಗಳೆಂಬಂತೆ ಹೇಳುತ್ತದೆ.[3] ಈ ಎಲ್ಲವುಗಳಿಂದ ಏಕಾಂತದ ರಾಮಯ್ಯನು ಜೈನಬಸದಿಯನ್ನೊಡೆದು ಶೈವವಿಗ್ರಹಗಳನ್ನು ಪ್ರತಿಷ್ಠಾಪಿಸಿದ ವಿಷಯವನ್ನು ಪ್ರಸ್ತಾಪಿಸಿರುವುದಲ್ಲದೆ, ಅವನು ಬಸದಿಯ ಯಾವ ಯಾವ ಸ್ಥಾನಗಳಲ್ಲಿ ಸಾಹಸಕಾರ್ಯಗಳನ್ನು ಮಾಡಿದ ಎಂಬುದನ್ನು ಶಿಲ್ಪದಲ್ಲಿ ಚಿತ್ರಿಸಿ, ಕೆಳಗೆ ಆ ಚಿತ್ರಗಳಿಗೆ ಸರಿಹೊಂದುವ ಮಾಹಿತಿಗಳನ್ನು ಲಿಪಿಗಳಲ್ಲಿ ಕೆತ್ತಲಾಗಿದೆ. ಒಂದು ಚಿತ್ರ ಹಾಗೂ ಆ ಚಿತ್ರದ ಮಾಹಿತಿಯು ಹೀಗಿದೆ,

೧. ಶ್ರೀ ಬ್ರಹ್ಮೇಶ್ವರ ದೇವರಲ್ಲಿ ಏಕಾಂತದ ರಾಮಯ್ಯಂ ಬಸದಿಯ ಜಿನನೊಡ್ಡವಾಗಿ ತಲೆಯನರಿದು ಹರೆದ ಠಾವು.
೨. ಸಂಕಗಾವುಂಡನೊಡೆಯಲೀಯದೆ ಆಳುಂ ಕುದುರೆಯನ್ನೊಡ್ಡಿರಲು ಏಕಾಂತದ ರಾಮಯ್ಯ ಕಾದಿ ಗೆಲ್ದು ಜಿನನನೊಡೆದು ಲಿಂಗ ಪ್ರತಿಷ್ಠೆಯಂ ಮಾಡಿದ ಠಾವು
೩. ಶ್ರೀಮದೇಕಾಂತದ ರಾಮಯ್ಯಮಗೆ ಸಂಕಗಾವುಂಡನೋಲೆಯಂ ಕುಡುವ ಠಾವು[4]

ಜಾನ್ ಫ್ಲೀಟ್ ಅವರ ಪ್ರಕಾರ ಏಕಾನ್ತದ ರಾಮಯ್ಯನ ಈ ಹೋರಾಟವು ಕ್ರಿಸ್ತಶಕ 1200ರಕ್ಕಿಂತ ಪೂರ್ವದಲ್ಲಿ ನಡೆದಿರಬೇಕು. ಅನಂತರ ಈತ ಸ್ಥಾಪಿಸಿದ ವೀರ ಸೋಮನಾಥ ದೇವಾಲಯಕ್ಕೆ

ಮಹಾಮಂಡಳೇಶ್ವರ ಬಿಜ್ಜಳನು ದಾನ ಮಾಡಿದ ಎಂದು ಹೇಳುತ್ತಾರೆ.[5] ಕ್ರಿಸ್ತಶಕ 1184ರ ತಾಳಿಕೋಟೆ[6] ಶಾಸನದಲ್ಲಿ ಜೈನಬಸದಿಗಳಲ್ಲಿ ಜಿನಬಿಂಬಗಳನ್ನು ಹಾಳುಮಾಡಿ ಅಲ್ಲಿ ಶಿವಲಿಂಗವನ್ನು ಸ್ಥಾಪಿಸಿರುವ ಉಲ್ಲೇಖಿಸಿರುವ ಊರುಗಳಲ್ಲಿ ಅಬಲೂರು ಕೂಡ ಒಂದು. ಆದರೆ, ಅಬಲೂರಿನಲ್ಲಿರುವ ಶಾಸನದಲ್ಲಿರುವ ಮಾಹಿತಿಯ ಪ್ರಕಾರ, ಜಿನಮೂರ್ತಿಯನ್ನು ನಾಶ ಮಾಡಿ ಅಲ್ಲಿ ವೀರಸೋಮೇಶ್ವರನನ್ನು ಪ್ರತಿಷ್ಠಾಪಿಸಿದ್ದಾನೆ. ಜೊತೆಗೆ ಜೈನರೊಂದಿಗೆ ವಾಗ್ವಾದವನ್ನು ಮಾಡಿದ್ದಾನೆ. ಇದು ಶಿವಪಾರಮ್ಯದ ಕುರಿತು ವಾದವಿವಾದದಿಂದ ಕೂಡಿದ ಘಟನೆಯಾಗಿ ಕಂಡುಬರುತ್ತದೆ. ಶೈವದ ಏಕಾಂತದರಾಮಯ್ಯನು ತನ್ನ ಸ್ವಮತದ ಹಿರಿಮೆಗಾಗಿ ಜೈನಧರ್ಮದವರೊಂದಿಗೆ "ಶಿವ ಶ್ರೇಷ್ಠನೋ ಅಥವಾ ಜಿನನೋ?" ಎಂಬ ವಾದದಲಿ ಪಣ(ಭಿಚಿಟಟಜಟಿಂಜ) ಕಟ್ಟುತ್ತಾನೆ. ಶಾಸನದ ಪ್ರಕಾರ ಆ ಪಣವು ಹೀಗಿದೆ,,.

....ಎನೆ ಜೈನರೆಂಗು ನೀಂ ಮುಂನಿನನೀಂಹಿತರರ ಹೇಳಲೇಕೆ ನಿಂನಯ ಶಿರಮಂ ಜನಮಱಿಯಲರಿದು ಕೊಟ್ಟಾತನೊಳಿಂ ಪಡೆ ನೀನೆ ಭಕ್ತನಾತನೇ ದೇವಂ ಎನಲೇಕಾನ್ತದ ರಾಮಂ ಮನಸಿಜರಿಪುಗಿತ್ತು ತಲೆಯನಾಂ
ಪಡೆದಡೆ ನೀವೆನಗೀವ ಪಣದಮದೇನೆನೆ ಮುನಿದೆಂದರ್ಜ್ಜಿನನ ಕಿತ್ತು ಶಿವನಂ ನಿಲಿಪೆವು ಎನೆ ಕುಡುವುದೋಲೆಯಂ ನೀವನಗೆಂದಿತ್ತೋಲೆಗೊಂಡು ಶಿರಮಂ ತಾಂ ಭೋಂಕೆನಲರಿದು ಕುಡುವ ಪದದೊ
ಳು ಶಿವನಂ ಸಾಂನಿದ್ಧಮಾಡಿ ರಾಮಂ ನುಡಿಗಂ ಉಡುಗದೆ ಶಂಭುನೀನೆ ಶರಣೆಂನದಡಂ ಮನಮನ್ಯಬಾಭಾವದೊಳೊಡರ್ದಡಮೀಕ್ಕೃಪಾನಮುಖದಿಂ ತಲೆ ಪೋಗದೆ ನಿಲ್ಕದಲ್ಲದಿ
ರ್ದ್ದಡೆ ಶಿವ ನಿಂನ ಮುನ್ನಡಿಗುರುಳುಗೆನುತಂ ಕಲಿ ರಾಮನಾರ್ದ್ದು ಕೆಯ್ಗಿಡ ದರಿದಿಕ್ಕುಲುಂರಯಿಸಿದಂ ಶಿರಮಂ ಶಿವನಂಘ್ರಿಯುಗ್ಮದೊಳು ಅರೆಗಯಿ (ಗಾಯ್) ಗೊಂಡನೆ ಕಿತ್ತು ನೋಡಿದನೆ ಕೂರ್ಪಂಗ
ಅರಿದ ತಲೆ ಏಳು ದೆವಸಂಬರೆಗಂ ಮೞದಿಂ ಬಳಿಕ್ಕವಿತ್ತಂ ಹರನಾದರದಿಂ ತಲೆ ಕೆಲೆಯಿಲ್ಲದೆ ತಿರವಾದುದು ಲೋಕವಜೆಯೆ ರಾಮಂ ಪಡದಂ॥[7]

ಈ ಶಾಸನವು ಏಕಾಂತದರಾಮಯ್ಯನು ಅಳಂದೆಯಿಂದ ಮುಳಗುಂದದ ಮಾರ್ಗವಾಗಿ ಅಬಲೂರಿಗೆ ಬರುತ್ತಾನೆ. ಅಬಲೂರಲ್ಲಿರುವ ಬ್ರಹ್ಮೇಶ್ವರ ಗುಡಿಯಲ್ಲಿ ಪ್ರವೇಶಮಾಡುತ್ತಾನೆ. ಆ ಜೈನರೆಲ್ಲ ಸೇರಿ ಈ ಏಕಾಂತದ ರಾಮಯ್ಯಂಗೆ ಇಲ್ಲಿ *ಗುಡಿಯೊಳು ವಾಸವಾಗಬೇಡಿ, ದೋಷ ಬಪ್ಪುದು ನಿಮಗೆ ಇದು ಎಚ್ಚರ* ಎನ್ನುತ್ತಾರೆ. ಇದೇ ಸಮಯಕ್ಕೆ ಎಲ್ಲ ಜೈನ ಅನುಯಾಯಿಗಳು ಸೇರುತ್ತಾರೆ. ಆಗ ಶಿವ ಭಕ್ತ ಏಕಾಂತದ ರಾಮಯ್ಯಂಗೂ ಜೈನರಿಗೂ ವಾದ–ಪ್ರತಿವಾದ ತೀವ್ರಗೊಳ್ಳುತ್ತದೆ. ಅಲ್ಲಿ ಶಿವಪಾರಮ್ಯ–ಜಿನಪಾರಮ್ಯಗಳ ಮೇಲೆ ಚರ್ಚೆ ಬಿರುಸಿನಿಂದ ಸಾಗುತ್ತದೆ. ಅದಕ್ಕೆ ಜೈನರು 'ಹಿಂದಿನ ಪೌರುಷದ ಮಾತುಗಳನ್ನಾಡದಿರು' ಎಂದು ಕೆಣಕಿ, ನಿಮ್ಮ ಶಿವಶ್ರೇಷ್ಠನಾದರೆ, *ಗಂಡಗತ್ತರಿಯಿಂದ ನಿನ್ನ ತಲೆಯನ್ನು ಕತ್ತರಿಸಿಕೊಂಡು, ಏಳು ತೀರ್ಥ ಕ್ಷೇತ್ರಗಳನ್ನು ಮೆರೆಸಿ, ತಲೆಯನ್ನು ತಿರುಗಿ ಪಡೆ* ಆಗ ನಿನ್ನ ಶಿವಪಾರಮ್ಯವನ್ನು ಒಪ್ಪುತ್ತೇವೆ ಎಂದು ಪಣ ಕಟ್ಟುತ್ತಾರೆ.

ಹೀಗೆ ಸರ್ವರ ಸಮ್ಮುಖದಲ್ಲಿ ತನ್ನ ತಲೆಯನ್ನು ಕಡಿದುಕೊಳ್ಳುವುದು, ಹಾಗೆಯೇ ಕತ್ತರಿಸಿದ ತಲೆಯನ್ನು ಸಜೀವವಾಗಿ ಏಳು ದಿನಗಳ ಕಾಲ ಶೈವತೀರ್ಥಯಾತ್ರೆ ಮಾಡಬೇಕು ಎಂದು, ಕೊನೆಗೆ ಬಂದು ತನ್ನ ತಲೆಯನ್ನು ಜೋಡಿಸಿಕೊಳ್ಳಬೇಕು ಎಂಬುದಾಗಿ ಪಣವನ್ನೊಡ್ಡಲಾಗುತ್ತದೆ. ನಿರಂಜನ ಕವಿ ತನ್ನ 'ಅಬಲೂರು ಚರಿತೆ'ಯಲ್ಲಿ ಏಕಾಂತದ ರಾಮಯ್ಯನು ಸಂದರ್ಶಿಸಿದ ಏಳು ಶೈವ ಕ್ಷೇತ್ರಗಳನ್ನು ಪಟ್ಟಿ ಮಾಡುತ್ತಾನೆ. ಅವು ಹೀಗಿವೆ,

೧. ಪುಲಿಗೆರೆ ಮೃಡಸೋಮನಾಥ,
೨. ಅಣ್ಣಿಗೇರಿಯ ಕಣ್ಣತ್ರಿ ಪಂಚಮುಖದ ಅಮೃತೇಶ,
೩. ಕಪ್ಪಡಿ ಸಂಗಮನಾಥ,
೪. ಕೆಂಬಾವಿ ಸ್ವಯಂಭೂ ಭೋಗೇಶ,
೫. ಸೊನ್ನಲಪುರ ಸಿದ್ಧರಾಮ,
೬. ಅವುಂದದ ನಾಗನಾಥ, ಕೊನೆಯದಾಗಿ
೭. ಹಂಪೆಯ ವಿರುಪಾಕ್ಷ[8]

ಇದು ಏಕಾಂತದ ರಾಮಯ್ಯನ ಸಪ್ತಶೈವ ತೀರ್ಥಯಾತ್ರೆಯಾಗಿದೆ ಹಾಗೂ ಇದು ಪುರಾಣದ ವಿಚಾರವಾಗಿದೆ. ಸೋಮನಾಥ ದೇವಾಲಯದಲ್ಲಿನ ಶಿಲ್ಪದಲ್ಲಿ ಚಿತ್ರಿಸಿದ ಶಾಸನವು ಹೀಗೆ ಹೇಳುತ್ತದೆ. "ಶ್ರೀ ಬ್ರಹ್ಮೇಶ್ವರ ದೇವರಲ್ಲಿ ಏಕಾಂತದ ರಾಮಯ್ಯಂ ಬಸದಿಯ ಜಿನನೊಡ್ಡವಾಗಿ ತಲೆಯನರಿದು ಹಡೆದ ಠಾವು॥ ಸಂಕಗಾವುಂಡನೊಡೆಯಲೀಯದೆ ಆಳುಂ ಕುದುರೆಯನೊಡ್ಡಿರಲು ಏಕಾಂತದ ರಾಮಯ್ಯಂ ಕಾದಿ ಗೆಲ್ದು ಜಿನನನೊಡೆದು ಲಿಂಗ ಪ್ರತಿಷ್ಠೆಯಂ ಮಾಡಿದ ಠಾವು"[9] ಈ ಎಲ್ಲ ಶಾಸನಗಳಲ್ಲಿ ಉಕ್ತವಾಗಿರುವ ವಿಷಯವು ಒಂದೇ ಆಗಿದೆ. ಅದು ಜೈನಧರ್ಮವು ಕ್ರಿಸ್ತಶಕ ಸುಮಾರು 12ನೆಯ ಶತಮಾನದ ಕಾಲದಲ್ಲಿ ರಕ್ಷಣೆ ಇಲ್ಲದೇ ಸೊರಗುವಂತಹ ಹಂತದಲ್ಲಿತ್ತು. ಆದರೂ ಜೈನಧರ್ಮೀಯ ಅನುಯಾಯಿಗಳಿಂದ ಜೈನಧರ್ಮದ ರಕ್ಷಣೆಯಂತೂ ನಡೆದ ಬಗ್ಗೆ ಇಲ್ಲಿ ಸಾಕಷ್ಟು ಮಾಹಿತಿ ಲಭ್ಯವಾಗುತ್ತದೆ.

ಅಬಲೂರಿನ ಏಕಾಂತದ ರಾಮಯ್ಯನ ಶಾಸನವನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಹಲವು ಅನುಮಾನಗಳು ವ್ಯಕ್ತಗೊಳ್ಳುತ್ತವೆ.

೧. ಅಬಲೂರಿನ ಏಕಾಂತದ ರಾಮಯ್ಯನ ಶಾಸನಕ್ಕೆ ನಿಖರವಾದ ತೇದಿ ಇಲ್ಲದಿರುವುದು.
೨. ನಡೆದ ಘಟನೆಗೂ ಶಾಸನದ ರಚನೆಗೂ ಸರಿಸುಮಾರು 50 ವರ್ಷಗಳ ಅಂತರವಿದೆ. ಕಾರಣ, ಘಟನೆ ನಡೆದ ಮೇಲೆ ಕಳಚೂರಿ ಚಕ್ರವರ್ತಿ 2ನೆಯ ಬಿಜ್ಜಳನು ಬೇಟಿ ನೀಡುತ್ತಾನೆ ಎಂದು ಹೇಳಲಾಗಿದೆ ಆದರೆ ಬಿಜ್ಜಳನ ಕಾಲ ಕ್ರಿಸ್ತಶಕ 1130–1167[10] ಆಗಿದೆ. ಅಂದರೆ ಈ ಶಾಸನದ ಕಾಲವು ವಿದ್ವಾಂಸರು ಅಂದಾಜಿಸಿದ ಹಾಗೆ ಕ್ರಿಸ್ತಶಕ 1200[11]
೩. ಶಾಸನವೇ ತಿಳಿಸುವಂತೆ ಏಕಾಂತದ ರಾಮಯ್ಯ ಸ್ಥಳೀಯನಲ್ಲ. ಆತ ಗುಲಬರ್ಗಾದ ಅಳಂದೆಯಿಂದ ಪುಲಗೇರಿ(ಇಂದಿನ ಲಕ್ಷ್ಮೇಶ್ವರ)ಗೆ ಬಂದು ಅಲ್ಲಿ ತಂಗಿದ್ದಾಗ, ಅವನಿಗೆ 'ಹುಲಿಗೆಱೆಯ ಸೋಮನಾಥನನಾರಾಧಿಸುತ್ತಮಿಪ್ಪುದುಮಾ ಪರಮೇಸ್ವರ ಪ್ರತ್ಯಕ್ಷ'ನಾಗಿ 'ಅಬ್ಬಲೂರುವರಗ್ರಾಮಂ ಜೈನರ ಪ್ರಾಬಲ್ಯ ಹೆಚ್ಚಾಗಿ, ಅವರು ಶ್ರೀ ಬ್ರಹ್ಮೇಶ್ವರ ದೇವಾಲಯದಲ್ಲಿ ಜಿನ ಪಾರಮ್ಯವನ್ನು ಮೆರೆಯುತ್ತಿದ್ದಾರೆ' ಎಂದು ಹೇಳಿದ ಮೇಲೆ ಅವನು ಅಬಲೂರಿಗೆ ಬರುತ್ತಾನೆ.
೪. ಈ ಮೇಲೆ ಹೇಳಿದಂತೆ ಶಾಸನದ ಕಾಲವು ನಿಖರವಾಗಿಲ್ಲ. ವಿದ್ವಾಂಸರು ಇದರ ಕಾಲವನ್ನು ಕ್ರಿಸ್ತಶಕ ಸುಮಾರು 1200[12] ಎಂದು ಹೇಳಲಾಗಿದೆ. ಕ್ರಿಸ್ತಶಕ 1184ರ ತಾಳಿಕೋಟೆ ಶಾಸನವು[13] ನೀಡುವ ಜಿನಬಿಂಬಗಳನ್ನು ಹಾಳುಮಾಡಿ ಶಿವಲಿಂಗವನ್ನು ಸ್ಥಾಪಿಸಿದ ಊರುಗಳಲ್ಲಿ ಅಬಲೂರು ಕೂಡ ಒಂದು ಎಂದು ಹೇಳಲಾಗಿದೆ.
೫. ಈ ಶಾಸನವನ್ನು ಹಾಕಿಸಿದ ಸಂದರ್ಭದಲ್ಲಿ, ಸುತ್ತಲಿನ ಪ್ರದೇಶಗಳ ಸರಿಸುಮಾರು ಶಾಸನಗಳಲ್ಲಿ ಜೈನರು ಅಬಲೂರಿನಲ್ಲಿ ಪ್ರಬಲರಾಗಿದ್ದರು ಎಂಬುದಾಗಿ ಎಲ್ಲಿಯೂ ಹೇಳುವುದಿಲ್ಲ. ಅಬಲೂರಿನಲ್ಲಿ ಸಿಗುವ ಶಾಸನಗಳಲ್ಲಿ ಕ್ರಿಸ್ತಶಕ 1101ರ[14] ಈ ಯಾವ ಶಾಸನಗಳು ಜೈನಧರ್ಮದ ಬಗ್ಗೆ ಚಕಾರ

ಎತ್ತುವುದಿಲ್ಲ. ಕ್ರಿಸ್ತಶಕ 1129ರ[15] ಶಾಸನವು ಅಬಲೂರಿನಲ್ಲಿ ವಾಮಶಕ್ತಿ ಪಂಡಿತರನ್ನು ಉಲ್ಲೇಖಿಸಿದೆ. ಇನ್ನು ಬಳ್ಳಿಗಾವಿಯ ಕ್ರಿಸ್ತಶಕ 1149[16]ರ ಶಾಸನವು ವಾದಿವಿದ್ಯಾಭರಣರನ್ನು ಕುರಿತು ಹೇಳುತ್ತದೆ. ಅಬಲೂರಿಗೆ ಬಳ್ಳಿಗಾವಿಯ 'ಲಕುಲೀಶ್ವರ ಪಂಡಿತ'ರು ಆಗಮಿಸಿರುವ ಕುರಿತು ಕ್ರಿಸ್ತಶಕ 1035[17]ರ ಒಂದು ಶಾಸನವು ಹೇಳುತ್ತದೆ. ಕ್ರಿಸ್ತಶಕ 1062ರ ಬಂಕಾಪುರದ ಶಾಸನದಲ್ಲಿ 'ರಾಜಗುರು ಶ್ರೀ ವರುಣಶಿವಪಂಡಿತದೇವ'[18] ಎಂಬ ಕಾಳಾಮುಖ ಪಂಡಿತರು ಇದ್ದದುರ ಬಗ್ಗೆ ಬೆಳಕು ಚೆಲ್ಲುತ್ತವೆ. ಅಂದರೆ ಜೈನಧರ್ಮ ಮತ್ತು ಶೈವಧರ್ಮಗಳ ಮಧ್ಯ ಸಂಘರ್ಷ ನಡೆದ ಅಬಲೂರಿನ ಸುತ್ತಲಿನ ಎಲ್ಲ ಪ್ರದೇಶಗಳು ಕಾಳಾಮುಖ ಶೈವಧರ್ಮಕ್ಕೆ ಸಂಬಂಧಿಸಿರುವದರ ಬಗೆಗೆ ಶಾಸನಗಳು ತಿಳಿಸುತ್ತವೆ.

೬. ಮುಂದೆವರಿದು, ಅಬಲೂರು ದೇವಾಲಯವಾದ 'ಸೋಮನಾಥ ಕ್ರಯವಾಗಿ ಮಾಡಿದಂ' ಎಂದು ಹೇಳಿದೆ. ನಾಡಿನಲ್ಲಿದ್ದ ಕಾಳಾಮುಖರು ಶಿಲ್ಪಿಗಳಾಗಿದ್ದರು. ಹೀಗಾಗಿ ಏಕಾಂತರಾಮಯ್ಯನು ಶಿಲ್ಪಿಯಾಗಿದ್ದು ಅಬಲೂರಿನ ಸೋಮನಾಥ ದೇವಾಲಯವನ್ನು ನಿರ್ಮಿಸಲೆಂದೇ ಅಳಂದೆಯಿಂದ ಬಂದಿರಬೇಕು. ಸೋಮನಾಥ ದೇವಾಲಯಕ್ಕಿಂತ ಪೂರ್ವದಲ್ಲಿರುವ ಬ್ರಹ್ಮೇಶ್ವರ ದೇವಾಲಯವು ಕ್ರಿಸ್ತಶಕ 1101[19]ರ ಶಾಸನದಲ್ಲಿ ಹೇಳುವಂತೆ ಅದು ಕಾಳಾಮುಖರ ಶ್ರದ್ಧಾಕೇಂದ್ರವಾಗಿತ್ತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಈ ಬ್ರಹ್ಮೇಶ್ವರ ದೇವಾಲಯಕ್ಕೆ, ಪಕ್ಕದ ಪ್ರಸಿದ್ಧ ಕಾಳಾಮುಖ ಶೈವಧರ್ಮದ ಕ್ಷೇತ್ರವಾದ ಬಳ್ಳಿಗಾವಿಯ ಲಕುಲೀಶ್ವರ ಪಂಡಿತ[20]ರು ಸೇರಿದಂತೆ, ವಾದಿವಿದ್ಯಾಭರಣ[21]ರು ಬಂದಿರುವುದರ ಬಗ್ಗೆ ಸ್ಪಷ್ಟವಾಗಿ ತಿಳಿಸುತ್ತವೆ.

೭. ಏಕಾಂತದ ರಾಮಯ್ಯನ ಶಾಸನವು ಒಂದು ಕಾವ್ಯದ ರೂಪದಲ್ಲಿದೆ. 12ನೆಯ ಶತಮಾನದಲ್ಲಿ ಬಂದ ಹಲವು ವಚನಕಾರರನ್ನು ಕುರಿತು ಹಲವು ಕವಿಗಳು(ಹರಿಹರ, ರಾಘವಾಂಕ, ಪಾಲ್ಕುರಿಕೆ ಸೋಮ ಸೇರಿದಂತೆ ಹಲವರು ಬಸವಾದಿ ಶರಣರನ್ನು ಕುರಿತು ಪುರಾಣಗಳನ್ನು ರಚಿಸಿದ್ದಾರೆ) ರಚಿಸಿದ ಪುರಾಣಗಳ ಪ್ರಭಾವದಿಂದ ಸೋಮನಾಥ ದೇಗುಲವನ್ನು ನಿರ್ಮಿಸಿದ ರಾಮಯ್ಯನನ್ನು ಕುರಿತು ಕಲ್ಪನಾತ್ಮಕವಾದ ಕಾವ್ಯಶಾಸನದ ಮೂಲಕ ಕವಿ 'ಕೇಶವರಾಜ'[22] ಸ್ಮರಿಸಿರುವ ಸಾಧ್ಯತೆ ಇದೆ.

೮. ಅಲ್ಲದೇ ಶಾಸನದಲ್ಲಿರುವ ವಿಷಯಕ್ಕೂ ಹಾಗೂ ದೇಗುಲದ ಮೇಲೆ ಚಿತ್ರಿಸಿದ ಚಿತ್ರಪಟಕ್ಕೂ ಕೆಲವು ಸಾಮ್ಯತೆಗಳು, ಕೆಲವು ಅಂತರಗಳು ಕಂಡುಬರುತ್ತವೆ.

೯. ಪುರಾಣದ ಹಾಗೂ ಶಾಸನದಲ್ಲಿ ಹೇಳಿರುವಂತೆ ಏಕಾಂತರಾಮಯ್ಯನು ಜೈನರ ಸಂಕಗಾವುಂಡನು ಹಾಕಿದ ಸವಾಲಿನ ಪ್ರಕಾರ ಏಳು ಶೈವ ಕ್ಷೇತ್ರಗಳನ್ನು ತನ್ನ ತಲೆಯನ್ನು ಕತ್ತರಿಸಿಕೊಂಡು ಹೋಗಬೇಕೆಂಬುದು.

೧೦.ಜೈವಿಕ ಕ್ರಿಯೆಯ ಪ್ರಕಾರ ಹಾಗೆ ತಲೆ ಕತ್ತರಿಸಿಕೊಂಡ ತಿರುಗಾಡುವುದು ಅಸಾಧ್ಯವಾದದ್ದಾಗಿದೆ. ಹಾಗಾದರೆ, ಆ ಸವಾಲಿನ ತಾತ್ಪರ್ಯವಾದರೂ ಏನು?

ಈ ಎಲ್ಲ ಘಟನೆಗಳಿಗೆ ಜೈನರನ್ನು ಕೇಂದ್ರವಾಗಿರಿಸಿ ಇದೇ ಶಾಸನವು ಕೆಲವೊಂದು

ಮಾಹಿತಿಗಳನ್ನು ನೀಡುತ್ತದೆ. ಅದು ಅಬಲೂರಿನಲ್ಲಿರುವ ಜೈನರು ಸಂಕನಗೌಡನ ಜೊತೆಗೆ ಬಂದು ಶಿವಲಿಂಗದೆದುರು ಜಿನಪಾರಮ್ಯ ಘೋಷಿಸಿದರೆಂದು ಹೇಳುತ್ತದೆ. ಮುಂದೆ ಜೈನನೊಬ್ಬ ಶಿವಲಿಂಗದ ಕಡೆಗೆ ಕಾಲುಮಾಡಿ ಮಲಗಿದ್ದನೆಂದು ಹರಿಹರನ ರಗಳೆ ಹೇಳುತ್ತದೆ. ಜೈನನೊಬ್ಬ ಕೆರಹುಗಾಲಿನಿಂದ ಶಿವದೇವಾಲಯವನ್ನು ಪ್ರವೇಶಿಸಿದನೆಂದು ಬಸವಪುರಾಣ ಹೇಳುತ್ತದೆ. ಹೀಗೆ ಹಲವು ಕೃತಿಗಳು ಭಿನ್ನ ಭಿನ್ನ ಸ್ವರೂಪದ ಕಾರಣಗಳನ್ನು ನೀಡುತ್ತವೆ. ಪರಸ್ಪರ ಸಂಬಂಧವಿಲ್ಲದ ಘಟನೆಗಳನ್ನು ಊಹೆ ಮಾಡಲಾಗುತ್ತಿದೆ. ಇಷ್ಟು ಅಲ್ಲದೇ ಏಕಾಂತರಾಮಯ್ಯನು ಒಂಟಿಯಾಗಿ ಶಿವಾಲಯದಲ್ಲಿ ಕುತಿರಲು, ಅಲ್ಲಿಗೆ ಬಂದ ಸಂಕಗಾವುಂಡನು ಅವನಿಗೆ ನಿಮ್ಮ ಶಿವ ಶ್ರೇಷ್ಠತೆಯನ್ನು ರುಜುವಾತು ಮಾಡು ಎಂದು ಸವಾಲು ಹಾಕುತ್ತಾನೆ. ಬಹುಶಃ ಈ ಘಟನೆಗೆ ಇವೆಲ್ಲವೂ ಕಾರಣಗಳಾಗಿದ್ದರೂ ಪೂರ್ಣ ಸತ್ಯದಂತೆ ಕಾಣುವುದಿಲ್ಲ. ಒಂದು ತೆರನಾದ ರೀತಿಯಲ್ಲಿ ಇದು ಅಧಿಕಾರ ಮತ್ತು ಧಾರ್ಮಿಕ ಪ್ರಭುತ್ವ ಅತಿರೇಕವಾಗಿರವ ಸಾಧ್ಯತೆ ಇದೆ.

ಕಾರಣ, ಏಕಾಂತರಾಮಯ್ಯ ಶಾಸನದಲ್ಲಿ ಸಂಕಗಾವುಂಡನ ಸವಾಲಿಗೆ ಪ್ರತಿಯಾಗಿ ಅಬಲೂರು ಚರಿತೆಯಲ್ಲಿ ಉಲ್ಲೇಖಿಸಿದ ಶೈವಕ್ಷೇತ್ರಗಳಿಗೆ ತೆರಳಿ ಅಲ್ಲಿ ತನ್ನ ಶೈವನಿಷ್ಠರನ್ನು ಸಂಪರ್ಕಿಸಿ, ಅವರಿಂದ ಆರ್ಥಿಕ ಬಲ ಮತ್ತು ತೋಳ್ಬಲಗಳ(ಚಿಕ್ಕ ಸೈನ್ಯ ತುಕ್ಕಡಿ) ಸಹಾಯವನ್ನು ಪಡೆದುಕೊಂಡು ಅಬಲೂರಿಗೆ ಮರಳುತ್ತಾನೆ. ನಂತರ ಆರ್ಥಿಕ ಹಾಗೂ ತೋಲ್ಬಗಳಿಂದ ಜೈನಬಸದಿಯಲ್ಲಿನ ಜಿನ ಬಿಂಬವನ್ನು ಒಡೆದು ಅಲ್ಲಿ ಶಿವಪಾರಮ್ಯವನ್ನು ಸ್ಥಾಪಿಸಿರುವ ಸಾಧ್ಯತೆ ಇದೆ. ಈ ರೀತಿಯ ವಿಚಾರಕ್ಕೆ ಒಂದು ಬಲವಾದ ಆಧಾರವಿದೆ. ಅದು ಅಬಲೂರಿನಲ್ಲಿರುವ ಸೋಮನಾಥ ದೇವಾಲಯದಲ್ಲಿ ಭಿತ್ತಿಯಲ್ಲಿ ಚಿತ್ರಿಸಿರುವ ಜಿನಮೂರ್ತಿಯನ್ನು ಒಡೆದು, ಅಲ್ಲಿ ಶಿವಮೂರ್ತಿಯನ್ನು ಸ್ಥಾಪಿಸುವ ಸಂದರ್ಭದಲ್ಲಿ ಏಕಾಂತರಾಮಯ್ಯನ ಹಿಂದೆ ಜನರಗುಂಪು ಇರುವುದು ಈ ಸಂಶಯಕ್ಕೆ ಕಾರಣವಾಗುತ್ತದೆ.

ಕಾರಣ ಈ ಶಾಸನವನ್ನು ಘಟನೆ ನಡೆದು ಸುಮಾರು 50 ವರ್ಷಗಳ ನಂತರ ಬರೆಸಿರುವುದು, ದೇವಾಲಯದ ಭಿತ್ತಿಯಲ್ಲಿನ ಉಬ್ಬುಶಿಲ್ಪಗಳು ದೇವಾಲಯ ನಿರ್ಮಾಣವಾದ ಎಷ್ಟೋ ವರ್ಷಗಳ ನಂತರದಲ್ಲಿ ಕೆತ್ತಿರುವ ಹಾಗೆ ಕಾಣುತ್ತವೆ. ಬಹುಮುಖ್ಯವಾಗಿ ಈ ಸಂಶಯಕ್ಕೆ ಕಾರಣವಾಗಿರುವುದು ದೇವಾಲಯದೊಳಗೆ ಇರುವ ಶಾಸನ ಲಿಪಿಯ ಶೈಲಿಯೂ, ಭಿತ್ತಿಮೇಲಿನ ಲಿಪಿಯ ಶೈಲಿಯೂ ಒಂದೇ ತೆರನಾಗಿರುವುದು. ಅಂದರೆ ಮೇಲಿನ ಘಟನೆ ಈ ಶಾಸನ ಹಾಕಿಸುವುದಕ್ಕಿಂತ ಸುಮಾರು 50 ವರ್ಷಗಳ ಹಿಂದೆ ನಡೆದಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗದಿದ್ದರೂ ಇಲ್ಲಿ ಚಿತ್ರಿಸಿರುವ ಹಾಗೂ ಶಾಸನದಲ್ಲಿ ತಿಳಿಸಿರುವ ಪ್ರಮಾಣದ ಭೀಕರತೆಯನ್ನು ಊಹೆ ಮಾಡಿಕೊಳ್ಳಬಹುದಾಗಿದೆ ಅಷ್ಟೆ.

ಈ ರೀತಿಯ ಜೈನರ ಮೇಲಿನ ಕಾಳಾಮುಖ ಶೈವರ ನೇರದಾಳಿಯಿಂದಾಗಿ ಜೈನರು ಕನಲಿ ಹೋಗಿರುವುದಂತೂ ಸತ್ಯ. ಇದಕ್ಕೆ ಪೂರಕವೆಂಬಂತೆ ಕ್ರಿಸ್ತಶಕ 1181ರ ತೇರದಾಳ[23]ದ ಶಾಸನವು ಜೈನ-ಶೈವ ಸಂಬಂಧವನ್ನು ಇನ್ನೊಂದು ರೀತಿಯಲ್ಲಿ ತಿಳಿಸುತ್ತದೆ. ತೇರದಾಳದ ನೇಮಿತೀರ್ಥೇಶ್ವರ ಜಿನಾಲಯವು ಮೊದಲು ಕೊಲ್ಹಾಪುರದ ರೂಪನಾರಾಯಣ ಬಸದಿಯ ಆಡಳಿತದಲ್ಲಿ ಇತ್ತು. ಆದರೆ ಅದೇ ಊರಿನ ಎಲ್ಲಾ ನಕರಗಳ(ವ್ಯಾಪಾರಸ್ಥರು) ವಿನಂತಿಯಂತೆ ಕೊಲ್ಹಾಪುರದ ಘಟಿಕಾಸ್ಥಾನದ ಆಚಾರ್ಯರು ಮತ್ತು ಎಕ್ಕೋಟಿಯ ಸಂಖ್ಯಾತ ಗಣಂಗಳು ಒಂದುಗೂಡಿ ಆ ಜಿನಾಲಯವನ್ನು ಅದೇ ಊರಿನ ಕಲಿದೇವ ದೇವಾಲಯಕ್ಕೆ ಪ್ರತಿಬದ್ಧ ಮಾಡಿದ ವಿಷಯವನ್ನು ಹೇಳುತ್ತದೆ. ಇದು ಉತ್ತರ ಕರ್ನಾಟಕದಲ್ಲಿ ಜೈನಧರ್ಮದ ಮೇಲೆ ಶೈವಧರ್ಮೀಯರು ನಡೆಸುತ್ತಿದ್ದ ದಾಳಿಗಳ ಭಯವನ್ನು ಸೂಚ್ಯವಾಗಿ ತಿಳಿಸುತ್ತದೆ.

ಜೈನಧರ್ಮಕ್ಕೆ ಕ್ರಿಸ್ತಶಕ 10ನೆಯ ಶತಮಾನಕ್ಕಿಂತ ಪೂರ್ವದಲ್ಲಿದ್ದ ರಾಜಪ್ರಭುತ್ವದ ಬೆಂಬಲವು ಕ್ರಿಸ್ತಶಕ 12ನೆಯ ಶತಮಾನದಲ್ಲಿದ್ದಿದ್ದರೆ

ಅಂದಿನ ಸ್ವರೂಪವೇ ಭಿನ್ನವಾಗಿರುತ್ತಿತ್ತು. ಹಾಗೆ ಆಗಿದ್ದರೆ ಬಹುಶಃ ಅಂದಿನ ವಚನ ಚಳವಳಿಯ ಪ್ರಭಾವವನ್ನು ಇಷ್ಟರ ಮಟ್ಟಿಗೆ ಇಂದು ನಾವು ನಿರೀಕ್ಷಿಸಲು ಸಾಧ್ಯವಿರುತ್ತಿರಲಿಲ್ಲ. ಕ್ರಿಸ್ತಶಕ 12ನೆಯ ಶತಮಾನದ ದಿನಗಳು ಜೈನಧರ್ಮದ ದಿನಗಳಾಗಿರದೆ ಶೈವಧರ್ಮದ ದಿನಗಳಾಗಿ ರೂಪಾಂತರವಾಗಿರುವುದಷ್ಟೇ ಅಲ್ಲದೇ, ಜೈನಧರ್ಮದ ಸ್ವರೂಪವೇ ರೂಪಾಂತರವಾಗಿ ಹೋಗಿತ್ತು. ಇದಕ್ಕೆ ಕಾರಣ ಈ ಕಾಲದಲ್ಲಿ ಕಳಚೂರಿಯ ಚಕ್ರವರ್ತಿ ಬಿಜ್ಜಳನ ಸಹಕಾರದಿಂದ ಕಾಳಾಮುಖ ಶೈವಧರ್ಮವು ಪ್ರಬಲವಾಗಿ ತನ್ನ ಬಾಹುಗಳನ್ನು ಚಾಚಿ ನಿಂತು ಶೈವಧರ್ಮವನ್ನು ನಾಡಿನೂದ್ದಗಲಕ್ಕೂ ಚಾಚು ಕೈಂಕರ್ಯದಲ್ಲಿ ತೊಡಗಿದ್ದರು. ಜೈನಧರ್ಮಕ್ಕೆ ಪ್ರಬಲ ರಾಜಸತ್ತೆಯ ಆಶ್ರಯ ಇಲ್ಲದೆ ಹೋದದ್ದರಿಂದ ಹಾಗೂ ತನ್ನಲ್ಲಿ ಮೂಲತಃ ಆಕ್ರಮಣಶೀಲತೆಯ(ಒಟಟುಣಜಟಚಿಭಿಧಿ) ಕೊರತೆ ಇದ್ದುದರಿಂದ ಉಳಿದ ಧರ್ಮಗಳೊಂದಿಗೆ ಹೋರಾಡಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳದೇ ಹೋಯಿತು. ಈ ಆಕ್ರಮಣಶೀಲತೆಯ ಕೊರತೆಯೇ ಆ ಧರ್ಮದ ಇಳಿಮುಖಕ್ಕೆ ಒಂದು ಕಾರಣವಾಗಿದೆ ಎಂದು ಚಿದಾನಂದಮೂರ್ತಿ ಅವರು ಅಭಿಪ್ರಾಯಪಡುತ್ತಾರೆ. ಆದರೆ ಅಹಿಂಸೆಯನ್ನು ಬೋಧಿಸುವ ಒಂದು ಧರ್ಮದಿಂದ ನಾವು ಆಕ್ರಮಣಶೀಲತೆಯನ್ನು ನಿರೀಕ್ಷೆ ಮಾಡುವುದು ಎಷ್ಟು ಸಮಂಜಸ? ಆದರೂ ಬೌದ್ಧಧರ್ಮೀಯರ ಮೇಲಿನ ಜೈನಧರ್ಮೀಯರ ಅಭಿಪ್ರಾಯಗಳನ್ನು ಗಮನಿಸಿದಾಗ ಹಾಗೆ ಸ್ವಲ್ಪವಾದರೂ ಆಕ್ರಮಣಶೀಲತೆಯನ್ನು ಪ್ರದರ್ಶಿಸಬಹುದಾಗಿತ್ತು. ಆದರೆ ನಾವು ಅಂದುಕೊಂಡ ಹಾಗೆ ಆ ಧರ್ಮಕ್ಕೆ ಕ್ರಿಸ್ತಶಕ 12ನೆಯ ಶತಮಾನದ ಸಂದರ್ಭದಲ್ಲಿ ರಾಜಾಶ್ರಯ ಮತ್ತು ಆರ್ಥಿಕತೆಯ ಹಿನ್ನಡೆಯು ಜೈನಧರ್ಮ ಕಳೆಗುಂದಲು ಕಾರಣವಾಗಿರುವ ಸಾಧ್ಯತೆ ಇದೆ. ಜೈನಧರ್ಮವು ತನ್ನ ಅಹಿಂಸಾ ತತ್ವಗಳ ಅಡಿಯಲ್ಲಿ ಧಾರ್ಮಿಕ ಸೌಧವನ್ನು ಕಟ್ಟಲು ಹೊರಟಾಗ ಅದಕ್ಕೆ ಮೂಲದಲ್ಲಿ ಆ ವಾತಾವರಣ ದೊರಕಿತ್ತು. ಆದರೆ ಎಲ್ಲಾ ಕಾಲಘಟ್ಟದಲ್ಲೂ ಅಂತಹ ವಾತಾವರಣವನ್ನು ನಿರೀಕ್ಷಿಸುವುದು ಕೂಡ ತಪ್ಪಾಗಿ ಕಾಣುತ್ತದೆ. ತನ್ನ ಅಸ್ತಿತ್ವನ್ನು ಉಳಿಸಿಕೊಳ್ಳಲಾಗದಿದ್ದರೆ ಅದು ಅನ್ಯರೊಂದಿಗೆ ಅನಿವಾರ್ಯವಾಗಿ ಸೌಹಾರ್ಧಿತ ಒಪ್ಪಂದಕ್ಕೆ ಅಣಿಯಾಗಬೇಕಾಗುತ್ತದೆ. ಆ ರೀತಿಯ ಕೆಲಸವನ್ನು ಜೈನಧರ್ಮವು ಕ್ರಿಸ್ತಶಕ 12ನೆಯ ಶತಮಾನದ ನಂತರದಲ್ಲಿ ಅಂದರೆ, ಜೈನಧರ್ಮದ ಮೇಲೆ ಎಲ್ಲ ದುರಂತಗಳು ಸಂಭವಿಸಿದ ತರುವಾಯದಲ್ಲಿ ಮಾಡಿಕೊಂಡಿರುವುದು ಅದರ ಗೌಣತೆಗೆ ಕಾರಣವಾಯಿತು ಎಂಬ ಅಭಿಪ್ರಾಯ ಸಹಜವಾಗಿ ಮೂಡುತ್ತದೆ.

*ಅಬಲೂರು ಶಾಸನವನ್ನು ಎಪಿಗ್ರಫಿ ಇಂಡಿಕಾದ 5ನೆಯ ಸಂಪುಟದಲ್ಲಿ (ಪುಟ ಸಂಖ್ಯೆ 245–252) ಜೆ.ಎಫ್.ಫ್ಲೀಟ್ ಸಂಪಾದಿಸಿ, ಪ್ರಕಟಿಸಿದ್ದಾರೆ.

**ಅಡಿಟಿಪ್ಪಣಿಗಳು**

೧. ಜೈನಿಸಂ ಇನ್ ಸೌತ್ ಇಂಡಿಯಾ: ದೇಸಾಯಿ ಪಿ.ಬಿ. ಪುಟ ೧೪೦
೨. ಎ.ಇಂ. ಸಂಪುಟ ೧೬: ಪುಟ ೪೬
೩. ಅದೇ.. ಪುಟ ೪೬
೪. ಎ.ಇಂ. ಸಂಪುಟ 5: ಪುಟ ೨೬೧
೫. ಅದೇ.. ಪುಟ ೨೧೩
೬. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ. ೧೦: ಶಾ.ಸಂ. 84
೭. ಎ.ಇಂ. ಸಂಪುಟ ೫: ಪುಟ ೨೪೫–೨೫೨
೮. ನಿರಂಜನ ಕವಿ ವಿರಚಿತ ಅಬಲೂರು ಚರಿತ್ರೆ: ಸಂ. ಬಸವರಾಧ್ಯ ಎನ್.
೯. ಎ.ಇಂ. ಸಂಪುಟ ೫: ಪುಟ ೨೬೧
೧೦.ಕರ್ನಾಟಕ ಚರಿತ್ರೆ: ಕರ್ನಾಟಕದಲ್ಲಿ ಕಲಚೂರಿಗಳು (ಕಲಚೂರಿರ್ಯರು): ವಸಂತಮಾಧವ ಕೆ.ಜಿ.; ಪುಟ ೬೯
೧೧. ಎ.ಇಂ. ಸಂಪುಟ 5:ಪುಟ 237; ಶಾಸನ ಸಾಹಿತ್ಯ ಸಂಚಯ: ಸಂ. ಅಣ್ಣಿಗೇರಿ ಎ.ಎಂ.; ಶೇಷಶಾಸ್ತ್ರಿ ಆರ್.; ಶಾ.ಸಂ. ೧೬
೧೨.ಎ.ಇಂ. ಸಂಪುಟ ೫: ಪುಟ ೨೩೭; ಶಾಸನ ಸಾಹಿತ್ಯ ಸಂಚಯ: ಸಂ. ಅಣ್ಣಿಗೇರಿ ಎ.ಎಂ.; ಶೇಷಶಾಸ್ತ್ರಿ ಆರ್.; ಶಾ.ಸಂ.೧೬
೧೩.ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧೦: ಶಾ.ಸಂ. ೮೪
೧೪.ಎ.ಇಂ. ಸಂಪುಟ ೫: ಪುಟ ೨೧೮), ಕ್ರಿಸ್ತಶಕ 1104; ಎ.ಇಂ. ಸಂಪುಟ ೫: ಪುಟ ೨೧೩ ಕ್ರಿಸ್ತಶಕ ೧೧೫೩; ಎ.ಇಂ. ಸಂಪುಟ 5: ಪುಟ ೨೩೪
೧೫. ಅದೇ.. ಪುಟ ೨೨೫
೧೬.ಅದೇ.. ಪುಟ ೨೨೩
೧೭.ಅದೇ.. ಪುಟ ೨೨೮)
೧೮. ಎಸ್.ಐ.ಐ. ಸಂಪುಟ ೧೮; ಶಾ.ಸಂ. ೬೬
೧೯.ಎ.ಇಂ. ಸಂಪುಟ 5: ಪುಟ ೨೧೮
೨೦.ಅದೇ.. ಪುಟ ೨೨೮
೨೧.ಅದೇ.. ಪುಟ ೨೨೩
೨೨.ಅದೇ.. ಪುಟ ೨೫೨
೨೩.ಕ.ಇ. ಸಂಪುಟ ೫; ಜಮಖಂಡಿ; ೯೮